ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ | E-mail : kannadapostnews@gmail.com | / ಕನ್ನಡ post | Price: ₹1
Vol.No.01 | Issue. 291 | Pages. 2 | Date: 11-10-2025, SATURDAY | RNI NO: KARKAN/2024/89601 | Kannada Daily
ಸಂಪುಟ : 01 - ಸಂಚಿಕೆ : 291 - ಪುಟಗಳು : 2 11-10-2025 ಶನಿವಾರ | Ph: 8762954248 | ದರ : ₹1

# ಈ ಬಾರಿ ಹಾಸನಾಂಬ ದರ್ಶನ ಸುಸೂತ್ರ

## ಕಟ್ಟುನಿಟ್ಟಿನ ಕ್ರಮಕ್ಕೆ ಜನರ ಬಹುಪರಾಕ್ | ದೇಗುಲದಲ್ಲೇ ಸಚಿವರ ಮೊಕ್ಕಾಂ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಕ್ತಿ ದೇವತೆ ಹಾಸನಾಂಬ ಸಾರ್ವಜನಿಕ ದರ್ಶನ ಶುಕ್ರವಾರದಿಂದ ಆರಂಭವಾಗಿದ್ದು ಸಾವಿರಾರು ಜನರು ಸುಗಮವಾಗಿ ದೇವಿ ದರ್ಶನ ಪಡೆದರು.

ಕಳೆದ ವರ್ಷ ವಿಐಪಿ ಪಾಸ್ ಬೇಕಾಬಿಟ್ಟಿ ಹಂಚಿಕೆಯಿಂದ ಗೊಂದಲ ನಿರ್ಮಾಣವಾಗಿತ್ತು. ಈ ಬಾರಿ ಆ ಪ್ರಕ್ರಿಯೆಗೆ ತಿಲಾಂಜಲಿ ಇಟ್ಟಿರುವ ಜಿಲ್ಲಾಡಳಿತ ಪಾಸ್‌ಗಳನ್ನು ವಿತರಿಸಿಲ್ಲ. ಹೀಗಾಗಿ ಧರ್ಮದರ್ಶನ ಸಾಲಿನಲ್ಲಿ ಭಕ್ತರು ಬಂದರು. ಸಂಜೆ 7ರ ವರೆಗೆ ಮಾತ್ರ ದರ್ಶನಕ್ಕೆ ಅವಕಾಶವಿದ್ದರಿಂದ ಮಧ್ಯಾಹ್ನ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರಲಿಲ್ಲ.

ಸಾಮಾನ್ಯ ಭಕ್ತರ ಜೊತೆ ಬ್ರಹ್ಮಾಂಡ ಗುರೂಜಿ, ಮಾಜಿ ಸಚಿವ ಎ.ಮಂಜು, ಎಂಎಲ್‌ಸಿ ಡಾ.ಸೂರಜ್ ರೇವಣ್ಣ ಮೊದಲಾದವರು ದೇವಿ ದರ್ಶನ ಪಡೆದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗೂ ಸಂಸದ ಶ್ರೇಯಸ್ ಪಟೇಲ್ ದೇವಾಲಯದಲ್ಲೇ ಮೊಕ್ಕಾಂ ಹೂಡಿ ಎಲ್ಲಾ ವ್ಯವಸ್ಥೆ ಪರಿಶೀಲಿಸಿದರು.



**ಬೆಳ್ಳಂ ಬೆಳಿಗ್ಗೆ ಸಚಿವರ ದೌಡು**

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಪಟೇಲ್ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಬೆಳಿಗ್ಗೆಯೇ ದರ್ಶನಕ್ಕೆ ಮಾಡಿರುವ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಿದರು. ಸಚಿವರಿಗೆ ಡಿಸಿ ಲತಾಕುಮಾರಿ, ಎಸ್ಪಿ ಮೊಹಮದ್ ಸುಜೀತಾ ಸಾಥ್ ನೀಡಿದರು. ಎಲ್ಲರೂ ದೇಗುಲದ ಆವರಣದಲ್ಲಿ ರೌಂಡ್ ಹಾಕಿದರು. ಸರದಿ ಸಾಲು, ಭಕ್ತರ ದರ್ಶನ, ಭಕ್ತರಿಗಾಗಿ ಮಾಡಿರುವ ವ್ಯವಸ್ಥೆ ಪರಿಶೀಲನೆ ನಡೆಸಿದರು.

ಆದರೂ ಮಳೆ ಅಡ್ಡಿ ನಡುವೆಯೂ ಸರತಿ ಸಾಲಿನಲ್ಲಿ ಭಕ್ತರು ದರ್ಶನಕ್ಕೆ ಆಗಮಿಸಿದ್ದರು. ಬೆಳಿಗ್ಗೆ 6 ಗಂಟೆಯಿಂದ ಆರಂಭವಾದ ದರ್ಶನ ಸಂಜೆ 7 ಗಂಟೆ ವರೆಗೂ ಮುಂದುವರಿದಿತ್ತು. ನಂತರ ನೈವೇದ್ಯ ಹಿನ್ನೆಲೆ ದರ್ಶನ ಇರಲಿಲ್ಲ.

**ವೀಕ್ಷಣೆಗೆ ಸಮಯ ನಿಗದಿ:** ಈ ಬಾರಿ ಹಾಸನಾಂಬೆ ದರ್ಶನೋತ್ಸವದಲ್ಲಿ ಕೆಲ ಬದಲಾವಣೆ ತರಲಾಗಿದ್ದು, ಹತ್ತಾರು ವರ್ಷಗಳಿಂದ ಇದ್ದ ವಿಐಪಿ-ವಿವಿಐಪಿ ಪಾಸ್‌ಗೆ ಈ ಬಾರಿ ಕೊಕ್ ನೀಡಲಾಗಿದೆ. ಹೊಸದಾಗಿ ಗೋಲ್ಡ್ ಕಾರ್ಡ್ ಪಾಸ್ ನೀಡಲಾಗುತ್ತಿದೆ. ಮಾಜಿ ಶಾಸಕರು, ಕೆಲ ಉನ್ನತ ಮಟ್ಟದ ಅಧಿಕಾರಿಗಳು, ಕೆಲ ಗಣ್ಯ ವ್ಯಕ್ತಿಗಳಿಗೆ ಗೋಲ್ಡ್ ಪಾಸ್ ವಿತರಣೆ ಮಾಡಲಾಗುತ್ತಿದೆ.

ಒಬ್ಬರು 1 ಪಾಸ್ ಪಡೆದು ಸರತಿ ಸಾಲಿನಲ್ಲಿ ದರ್ಶನ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಗೋಲ್ಡ್ ಪಾಸ್‌ನಲ್ಲೇ ದಿನಾಂಕ ಮುದ್ರಿಸಲಾಗಿದೆ. ನಿಗದಿತ ದಿನ ಮತ್ತು ಸಮಯದಲ್ಲೇ ಗೋಲ್ಡ್ ಪಾಸ್‌ನಲ್ಲಿ ದರ್ಶನ ಮಾಡುವುದು ಕಡ್ಡಾಯವಾಗಿದೆ. ದಿನಕ್ಕೆ 1 ಸಾವಿರ ಪಾಸ್ ಮಾತ್ರ ವಿತರಣೆಗೆ ನಿರ್ಧರಿಸಲಾಗಿದೆ. ಬೆಳಿಗ್ಗೆ 7-10 ಗಂಟೆ ವರೆಗೆ ಮಾತ್ರ ಗೋಲ್ಡ್ ಪಾಸ್‌ಗೆ ಅವಕಾಶ ಕಲ್ಪಿಸಲಾಗಿದೆ. 10 ಗಂಟೆ ನಂತರ ಗೋಲ್ಡ್ ಪಾಸ್ ಹಿಡಿದು ಬಂದರೂ ಪ್ರವೇಶ ಇಲ್ಲ.

### ಶಿಷ್ಟಾಚಾರದಲ್ಲಿ ಬದಲಾವಣೆ

ಹಾಸನಾಂಬ ಮಹೋತ್ಸವದ ಶಿಷ್ಟಾಚಾರದಲ್ಲಿ ಬದಲಾವಣೆ ಮಾಡಲಾಗಿದ್ದು, ಶಾಸಕರು, ಸಚಿವರು, ನ್ಯಾಯಮೂರ್ತಿಗಳ ದರ್ಶನಕ್ಕೂ ನಿಬಂಧನೆ ಹಾಕಲಾಗಿದೆ. ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ಮಾತ್ರ ದರ್ಶನಕ್ಕೆ ಅವಕಾಶ ನೀಡಲಾಗಿದೆ. ನಂತರ ಬಂದ ಅತಿ ಗಣ್ಯರ ಶಿಷ್ಟಾಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ನಂತರ ಬಂದರೆ ದರ್ಶನ ಇರುವುದಿಲ್ಲ ಎಂದು ಜಿಲ್ಲಾಡಳಿತ ಸ್ಪಷ್ಟವಾಗಿ ಹೇಳಿದೆ. ನಿಗದಿತ ಸಮಯ ಮುಗಿದರೆ ಶಿಷ್ಟಾಚಾರದ ಗೇಟ್ ಕ್ಲೋಸ್ ಆಗಲಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. ಇನ್ನು ದೇವಾಲಯದ ಆವರಣಕ್ಕೆ ಗಣ್ಯರ ಖಾಸಗಿ ವಾಹನ ಬರುವಂತಿಲ್ಲ, ಬದಲಾಗಿ ಪ್ರವಾಸಿ ಮಂದಿರದಿಂದ ಜಿಲ್ಲಾಡಳಿತ ಸಿದ್ಧಪಡಿಸಿರುವ ಶಿಷ್ಟಾಚಾರದ ವಾಹನದಲ್ಲೇ ಬಂದು ಹೋಗಬೇಕಿದೆ. ಎಸ್ಕಾರ್ಟ್, ಪೈಲೆಟ್‌ಗಳಿಗೂ ನಿರ್ಬಂಧ ಹೇರಲಾಗಿದೆ.



### ವಸ್ತು ಪ್ರದರ್ಶನಕ್ಕೆ ಸಚಿವರ ಚಾಲನೆ

ಹಾಸನಾಂಬ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಗರದ ಸರ್ಕಾರಿ ವಿಜ್ಞಾನ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿರುವ ವಸ್ತು ಪ್ರದರ್ಶನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಶುಕ್ರವಾರ ಚಾಲನೆ ನೀಡಿದರು.




ಈ ವೇಳೆ ಮಾತನಾಡಿದ ಅವರು, ಪಶುಪಾಲನಾ ಇಲಾಖೆ, ಕೃಷಿ ಇಲಾಖೆ ಹಾಗು ಸ್ತ್ರೀ ಶಕ್ತಿ ಸಂಘಗಳು ತಯಾರಿಸುವ ವಸ್ತುಗಳ ಪ್ರದರ್ಶನ ಏರ್ಪಡಿಸಿದ್ದು ಸಾರ್ವಜನಿಕರು ಇಲ್ಲಿಗೆ ಭೇಟಿ ನೀಡಿ ಪ್ರೋತಾಹಿಸಬೇಕೆಂದರು.

ಆಧುನಿಕತೆ ಬೆಳೆದಂತೆ ಗ್ರಾಮೀಣ ಸಂಸ್ಕೃತಿ ಮರೆಯಾಗುತ್ತಿದೆ. ಗ್ರಾಮ ಜೀವನ ಹೇಗಿರುತ್ತದೆಂಬುದಕ್ಕೆ ವಸ್ತು ಪ್ರದರ್ಶನ ಸಾಕ್ಷಿಯಾಗಿದೆ. ಅ. 23ರ ವರೆಗೆ ಬೆಳಿಗ್ಗೆ 9 ರಿಂದ ರಾತ್ರಿ 8.30ರ ವರೆಗೆ ಪ್ರದರ್ಶನ ಇರಲಿದೆ. ಜಿಲ್ಲೆಯ ಯುವ ಉದ್ಯಮಿಗಳ ಉತ್ಕೃಷ್ಟ ಉತ್ಪನ್ನಗಳನ್ನು ಜಿಲ್ಲೆ ಮತ್ತು ಹೊರ ಜಿಲ್ಲೆಯ ಗ್ರಾಹಕರಿಗೆ ಇನ್ನಷ್ಟು ಪರಿಚಯಿಸಿ ಮಾರುಕಟ್ಟೆ ವ್ಯವಸ್ಥೆ ವೃದ್ಧಿಸುವುದು ಪ್ರಮುಖ ಉದ್ದೇಶ ಆಗಿದೆ. ವಸ್ತು ಪ್ರದರ್ಶನದಲ್ಲಿ ಸರ್ಕಾರದ ಸಹಾಯಧನ ಯೋಜನೆಗಳ ಫಲಾನುಭವಿಗಳು ಉದ್ಯಮಿಗಳಾಗಿ ಹೊರಹೊಮ್ಮಿ ರಾಜ್ಯ, ರಾಷ್ಟ್ರ ಮಾರುಕಟ್ಟೆ ಮೀರಿ ವಿದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡುತ್ತಿರುವಂತೆ, ಅಂತಹ ಯೋಜನೆಗಳು ಮತ್ತು ಸರ್ಕಾರದ ಫಲಾನುಭವಿಗಳನ್ನು ನವ ಉದ್ಯಮ ಸ್ಥಾಪಿಸಲು ಕನಸು ಹೊತ್ತವರಿಗೆ ಪ್ರೇರಣೆಯಾಗಲೆಂದು ಪರಿಚಯಿಸಲಾಗುತ್ತಿದೆ ಎಂದು ಹೇಳಿದರು.

ವಸ್ತು ಪ್ರದರ್ಶನದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳಿದ್ದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪ್ರತಿ ಮಳಿಗೆಗೆ ಭೇಟಿ ನೀಡಿ ರೇಷ್ಮೆ ಬಟ್ಟೆ, ಊದುಬತ್ತಿ ತಯಾರಿಕಾ ವಿಧಾನ ಕೇಳಿದರು. ಆಕರ್ಷಣೀಯ ವಸ್ತುಪ್ರದರ್ಶನಕ್ಕೆ ಅವಕಾಶ ರೂಪಿಸುವುದರ ಜೊತೆಗೆ ವಿವಿಧ ನವೀನ ಕೃಷಿ ಯಂತ್ರೋಪಕರಣಗಳ ವೀಕ್ಷಣೆಗೂ ಅವಕಾಶ ಕಲ್ಪಿಸಲಾಗಿದ್ದು, ಇಲ್ಲಿರುವ ವಿಶೇಷ ತಳಿಯ ಕುರಿಗಳನ್ನು ಕಂಡು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ. ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್‌ಕುಮಾರ್ ಇತರರಿದ್ದರು.

## ರಸ್ತೆ ನಿರ್ಮಾಣದಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಹಾನುಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಂತ ಹಂತವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಆದ್ಯತೆ ನೀಡುತ್ತೇನೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಗ್ನಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ಮಾತನಾಡಿ, ಮಲೆನಾಡು ಭಾಗದಲ್ಲಿ ಹರಿಯುವ ನೀರನ್ನು ಬಯಲು ಸೀಮೆ ಪ್ರದೇಶಗಳಿಗೆ ಹರಿಸಲಾಗುತ್ತಿದೆ. ಆದರೆ ಅಲ್ಲಿನ ಜನತೆ ನೀರು ಕೊಟ್ಟರು ಅಗತ್ಯ ಮೂಲಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎತ್ತಿನಹೊಳೆ ಯೋಜನೆ ಉದ್ಘಾಟನೆಗೆ ಬಂದಾಗ ಎತ್ತಿನಹೊಳೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಹಣ ನೀಡದಿದ್ದಲ್ಲಿ ನೀರು ಹರಿಯಲು ಬಿಡುವುದಿಲ್ಲ ಎಂದಿದ್ದೆ. ಅದಕ್ಕೆ ಸ್ಪಂದಿಸಿರುವ ಡಿ.ಕೆ. ಶಿವಕುಮಾರ್ 82 ಕೋಟಿ ರೂ. ಎತ್ತಿನಹೊಳೆ ಯೋಜನೆಯಲ್ಲಿ ನೀಡಿದ್ದಾರೆ ಎಂದರು.

ಅಗ್ನಿ ಗ್ರಾಮದವರೆಗೆ ಸುಮಾರು 1 ಕಿ.ಮೀ.. ದೂರ ಡಾಂಬರು ರಸ್ತೆ ಹಾಗೂ 350 ಮೀಟರ್ ಕಾಂಕ್ರೀಟ್ ರಸ್ತೆಯನ್ನು ಸುಮಾರು 1.70 ಕೋಟಿ ರೂ. ವೆಚ್ಚದಲ್ಲಿ ಮಾಡಲು ಭೂಮಿಪೂಜೆ ನೆರವೇರಿಸಲಾಗಿದೆ. ಕುಡಿಯುವ ನೀರು, ರಸ್ತೆ, ಬೀದಿ ದೀಪಗಳನ್ನು ಬಯಸುತ್ತಾರೆ. ಅದನ್ನು ನೀಡಲು ನಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ಹಾನುಬಾಳ್ ಹೋಬಳಿಯಲ್ಲಿ ಮತ್ತಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸುತ್ತೇನೆ ಎಂದರು.

ತಾಲ್ಲೂಕು ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಾನುಬಾಳ್ ಭಾಸ್ಕರ್ ಮಾತನಾಡಿ, ನಾನು ಇದೇ ಗ್ರಾಮದಲ್ಲಿ ಹಲವು ವರ್ಷಗಳಿಂದ ವಾಸವಿದ್ದೆ. ಹದಗೆಟ್ಟ ರಸ್ತೆ ಹಾಗೂ ಅತಿಯಾದ ಮಳೆಯನ್ನು ನೋಡಿ ಗ್ರಾಮ ತೊರೆದಿದ್ದೆ. ನಾನು ಸಹ ಸರ್ಕಾರಕ್ಕೆ ಇಲ್ಲಿ ರಸ್ತೆ ನಿರ್ಮಾಣ ಮಾಡಲು ಮನವಿ ಸಲ್ಲಿಸಿದ್ದೆ. ಹಲವು ದಶಕಗಳ ನಂತರ ಶಾಸಕರ ಮುತುವರ್ಜಿಯಿಂದ ಇಲ್ಲಿ ರಸ್ತೆ ಆಗುತ್ತಿದೆ. ರಸ್ತೆ, ಆರೋಗ್ಯ, ವಿದ್ಯೆ ಜನ ಬಯಸುತ್ತಾರೆ. ಶಾಸಕರು ಎತ್ತಿನಹೊಳೆ ಯೋಜನೆ ಮೂಲಕ 82 ಕೋಟಿ ಅನುದಾನ ತಂದಿರುವುದಲ್ಲದೆ ಈ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೂ ಸಹ ಅನುದಾನ ತಂದಿರುವುದು ಸಂತೋಷದ ವಿಷಯ. ಪಕ್ಷಭೇದ ಮರೆತು ಅವರನ್ನು ಅಭಿನಂದಿಸುತ್ತೇನೆ ಎಂದರು.

ಬಿಜೆಪಿ ಮುಖಂಡ ಕ್ಯಾಮನಹಳ್ಳಿ ರಾಜ್‌ಕುಮಾರ್ ಮಾತನಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂತೋಷ್, ಬಿಜೆಪಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಮುಖಂಡರಾದ ರಂಗನಾಥ್, ಅಗಲಟ್ಟಿ ಚಂದ್ರಣ್ಣ, ಅಪ್ಪಣ್ಣ, ಉದ್ಯಮಿ ಸತೀಶ್, ಬಿಜೆಪಿ ಹಿರಿಯ ಮುಖಂಡ ಸುಬ್ಬೇಗೌಡ, ಪಿಡಿಓ ಹರೀಶ್, ಲೋಕೋಪಯೋಗಿ ಇಲಾಖೆ ಅಭಿಯಂತರ ರಜಾಕ್ ಇತರರಿದ್ದರು.

## ಮಾನವೀಯ ಮೌಲ್ಯ ಪ್ರತಿಪಾದನೆ ಶಿಕ್ಷಣದ ಧ್ಯೇಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಮಾನವೀಯ ಮೌಲ್ಯಗಳ ಪ್ರತಿಪಾದನೆ ಶಿಕ್ಷಣದ ಧ್ಯೇಯವಾಗಬೇಕು ಎಂದು ಯಳನಾಡು ಜ್ಞಾನಪ್ರಭು ಶ್ರೀ ಸಿದ್ದರಾಮ ದೇಶೀಕೇಂದ್ರ ಸ್ವಾಮೀಜಿ ಹೇಳಿದರು.




ನಗರದ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್.ಜಿ. ಚಂದ್ರೇಗೌಡ ಅವರ ಅಧ್ಯಾಪನ ಫಲ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಸತ್ಯ ಹೇಳುವುದು, ತೊಂದರೆಗೆ ಸಿಲುಕಿದವರ ನೆರವಿಗೆ ಧಾವಿಸಿದರೆ ಮಾತ್ರವೇ ಶಿಕ್ಷಣ ಪಡೆದಿದ್ದಕ್ಕೆ ಸಾರ್ಥಕತೆ ಬರಲಿದೆ. ಕೆಲ ಸಂದರ್ಭದಲ್ಲಿ ಸತ್ಯ ಹೇಳುವುದು ಕೂಡ ಕಷ್ಟ ಎಂಬುದು ಅನುಭವಕ್ಕೆ ಬಂದಿದೆ. ಜ್ಞಾನ, ವಿಜ್ಞಾನದ ಯುಗದಲ್ಲಿ ಮಾನವೀಯ ಮೌಲ್ಯಗಳನ್ನು ಮರೆಯಬಾರದು. ಸೇವೆಯಲ್ಲಿ ತೊಡಗಿದ ಶಿಕ್ಷಕ ಸದಾ ವಿದ್ಯಾರ್ಥಿ ಎನ್ನುವ ಅಂಶ ಮನಗಂಡು ಬೋಧನೆಯಲ್ಲಿ ತೊಡಗಿಸಿಕೊಂಡರೆ ಮಾತ್ರವೇ ಯಶಸ್ಸು ಗಳಿಸಲು ಸಾಧ್ಯ ಎಂದರು.

ದೇಶದ ಭವಿಷ್ಯ ಶಾಲೆ ಕಾಲೇಜುಗಳಲ್ಲಿ ನಿರ್ಮಾಣವಾಗಲಿದೆ ಎಂದು ಅನೇಕ ದಾರ್ಶನಿಕರು, ಶಿಕ್ಷಣ ತಜ್ಞರು ಹೇಳಿರುವುದು ಅರ್ಥಪೂರ್ಣವಾಗಿದೆ. ವಿವೇಕಾನಂದ ಬಿಇಡಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಸಹಸ್ರಾರು ವಿದ್ಯಾರ್ಥಿಗಳು ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವರು ನಿವೃತ್ತರಾಗಿದ್ದರೆ ಮತ್ತೆ ಕೆಲವರು ಸೇವಾ ನಿರತರಾಗಿದ್ದಾರೆ.

ಇನ್ನಷ್ಟು ಮಂದಿ ಉನ್ನತಾಧಿಕಾರಿಗಳಾಗಿರುವುದು ಹೆಮ್ಮೆಯ ಸಂಗತಿ. ಶಿಕ್ಷಕ ಸದಾ ವಿದ್ಯಾರ್ಥಿಯೆಂಬ ಮನೋಭಾವ ಹೊಂದಿದ್ದರೆ ಮಾತ್ರವೇ ಅಧ್ಯಾಪನವೆಂಬ ಹೆಸರಿಗೆ ಸಾರ್ಥಕತೆ ಬರಲಿದೆ. ಸುದೀರ್ಘ ಸೇವೆಯ ಬಳಿಕವೂ ಪ್ರೊ. ಎಸ್.ಜಿ. ಚಂದ್ರೇಗೌಡ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದು ಎಲ್ಲರಿಗೂ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ ಎಂದರು.

ಅಧ್ಯಾಪನ ಫಲ ಕೃತಿ ಬಿಡುಗಡೆ ಮಾಡಿದ ನಿವೃತ್ತ ಪ್ರಾಂಶುಪಾಲ ಪ್ರೊ. ಬಿ.ಕೆಂಚವೀರಯ್ಯ ಮಾತನಾಡಿ, ದಶಕಗಳ ಹಿಂದೆ ಆರಂಭಿಸಿದ್ದ ಕಾಲೇಜು ಹೆಮ್ಮರವಾಗಿ ಬೆಳೆದಿದೆ. ನಿರೀಕ್ಷೆಗೂ ಮೀರಿದ ಶಿಕ್ಷಕ ಸಮುದಾಯವನ್ನು ಕೊಡುಗೆಯಾಗಿ ನೀಡಿದೆ ಎಂದರೆ ಅತಿಶಯೋಕ್ತಿಯಲ್ಲ. ಪ್ರಾಧ್ಯಾಪಕರ ಅವಿರತ ಪರಿಶ್ರಮದಿಂದ ಎಲ್ಲವೂ ಸಾಧ್ಯವಾಗಿದೆ. ಎಲ್ಲರೂ ಒಟ್ಟಾಗಿ ಕಾಲೇಜಿನ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕೆಂದು ಕಿವಿಮಾತು ಹೇಳಿದರು.

ಲೇಖಕ ಪ್ರೊ. ಎಸ್.ಜಿ. ಚಂದ್ರೇಗೌಡ ಮಾತನಾಡಿ, ಜೀವನ ಎನ್ನುವ ಮೂರಕ್ಷರದಲ್ಲಿ ಎಲ್ಲವೂ ಅಡಗಿದೆ ಎಂಬುದನ್ನು ಹೇಳಿಕೊಡುವುದೇ ನಿಜವಾದ ಅಧ್ಯಾಪನವಾಗಿದೆ. ಗಂಡ ಗದ್ಯವಾದರೆ, ಹೆಂಡತಿ ಪದ್ಯ. ಇಬ್ಬರಿಗೂ ಜನಿಸಿದ ಮಕ್ಕಳು ರಗಳೆ ಎನ್ನುವ ಮೂಲಕ ಬೋಧನೆ ಔಚಿತ್ಯವನ್ನು ಹಾಸ್ಯದ ಮೂಲಕವೇ ವಿವರಿಸಿದರು. ನಿವೃತ್ತ ಪ್ರಾಂಶುಪಾಲ ಪ್ರೊ. ಕಪನೇಗೌಡ ಹಾಗು ನಿವೃತ್ತ ಪ್ರಾಧ್ಯಾಪಕ ಪ್ರೊ. ಶ್ರೀವಾಸ್ತವ ಅಧ್ಯಾಪನ ಫಲ ಕೃತಿಯನ್ನು ಸೂಕ್ತ ನಿದರ್ಶನ ಸಹಿತ ವಿಮರ್ಶಿಸಿದರು. ಪ್ರಾಂಶುಪಾಲ ಡಾ.ಮಲ್ಲಿಕಾರ್ಜುನ ಕುಡುವಕ್ಕಲಗಿ ಮಾತನಾಡಿದರು. ಆಯೋಜಕ ಎಂ.ಜಿ.ಸಿದ್ದರಾಮಯ್ಯ ಕಾಲೇಜಿನ ಹಿರಿಯ ವಿದ್ಯಾರ್ಥಿಗಳು ಅನಿಸಿಕೆ ಹಂಚಿಕೊಂಡರು.

ಡಾ.ಬಸವರಾಜ್, ಶೇಖರ್ ಸಂಕೋಡನಹಳ್ಳಿ, ವಿಜಯಕುಮಾರ್, ಬಿ.ಆರ್. ಶಶಿಧರ್, ಅರುಣ್ ಕುಮಾರ್, ರೇಖಾ ಹಾಗೂ ಇತರರಿದ್ದರು.

## ಇಂದು ಇಂಡಿಯಾನ ಆಸ್ಪತ್ರೆಯಿಂದ ವಾಕಥಾನ್



ಹಾಸನ: ವಿಶ್ವ ಆರ್ಥೈಟ್ಸ್ (ಸಂಧಿವಾತ) ದಿನದ ಪ್ರಯುಕ್ತ ಅ. 11ರ ಶನಿವಾರ ಬೆಳಿಗ್ಗೆ 8 ಗಂಟೆಗೆ ನಗರದ ಮಹಾರಾಜಾ ಪಾರ್ಕ್‌ನಿಂದ ಇಂಡಿಯಾನ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವರೆಗೆ ವಾಕಥಾನ್ ಏರ್ಪಡಿಸಲಾಗಿದೆ ಎಂದು ಆಸ್ಪತ್ರೆ ಕೀಲು ಮತ್ತು ಮೂಳೆ ತಜ್ಞ ಡಾ. ನಯೀಮ್ ಸಿದ್ದಿಕ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸಂಧಿವಾತ ಸಮಸ್ಯೆಯನ್ನು ಸಾರ್ವಜನಿಕರು ಹಗುರವಾಗಿ ಪರಿಗಣಿಸುತ್ತಾರೆ. ಆರಂಭದಲ್ಲೇ ಚಿಕಿತ್ಸೆ ಮೂಲಕ ಕಾಯಿಲೆ ಗುಣಪಡಿಸಿಕೊಳ್ಳಬಹುದಾದರೂ ನಿರ್ಲಕ್ಷ್ಯದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗುವ ಪರಿಸ್ಥಿತಿ ಸೃಷ್ಟಿಸಿಕೊಳ್ಳುತ್ತಾರೆ. ಈ ಬಗ್ಗೆ ಜಾಗೃತಿ ಮೂಡಿಸಲು ವಾಕಥಾನ್ ಹಮ್ಮಿಕೊಂಡಿದ್ದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಚಾಲನೆ ನೀಡಲಿದ್ದಾರೆ ಎಂದರು.

ಇಂಡಿಯಾನ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸುಸಜ್ಜಿತ ಉಪಕರಣಗಳಿದ್ದು ಶಸ್ತ್ರ ಚಿಕಿತ್ಸೆ ಮಾಡಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಅ. 12 ರಂದು 10 ರೋಗಿಗಳಿಗೆ ಉಚಿತ ಶಸ್ತ್ರ ಚಿಕಿತ್ಸೆ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಕಾಯಿಲೆ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಗಿದೆಯೆಂದರು. ಆಸ್ಪತ್ರೆಯ ಕೆ.ಆರ್. ಪ್ರದೀಪ್ ಹಾಜರಿದ್ದರು.

## ಅಪರಾಧ ತಡೆ ಪ್ರತಿಯೊಬ್ಬರ ಕರ್ತವ್ಯ: ನ್ಯಾಯಾಧೀಶೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಪರಾಧ ತಡೆಗಟ್ಟುವಲ್ಲಿ ಪ್ರತಿಯೊಬ್ಬರ ಪಾತ್ರ ಮುಖ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಜಿ.ಕೆ. ದಾಕ್ಷಾಯಿಣಿ ಹೇಳಿದರು.




ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಗರದ ಗುಡ್ ಸಿಟಿಜನ್ ಪದವಿ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಹೆಚ್ಚುತ್ತಿರುವ ಅಪರಾಧ ಕೃತ್ಯಗಳನ್ನು ತಡೆಯಬೇಕಾದರೆ ಸಂಬಂಧಪಟ್ಟ ಇಲಾಖೆಯೊಂದಿಗೆ ಕೈಜೋಡಿಸಬೇಕು. ಕಾನೂನು ಬಾಹಿರ ಚಟುವಟಿಕೆ ಕಂಡುಬಂದಾಗ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದರು.

ಗುಡ್ ಸಿಟಿಜನ್ ಪದವಿ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆರೋಗ್ಯ ಇಲಾಖೆಯ ಸಾಮಾಜಿಕ ಕಾರ್ಯಕರ್ತೆ ವಿಮಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆಯ ರೂಪವತಿ, ಉಪನ್ಯಾಸಕರಾದ ಶ್ರೀನಿವಾಸ್, ಸಂಜಯ್ ಕುಮಾರ್ ಇತರರಿದ್ದರು.

## ಕರ್ತವ್ಯ ಲೋಪ: ಇಬ್ಬರು ವಾರ್ಡನ್‌ಗಳ ಅಮಾನತು

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವ ಕರ್ತವ್ಯಕ್ಕೆ ನಿಯೋಜಿಸಿದ್ದ ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ನ ಇಬ್ಬರು ವಾರ್ಡನ್‌ಗಳು ತಮಗೆ ನೀಡಿದ್ದ ಕರ್ತವ್ಯದ ಗುರುತಿನ ಚೀಟಿಯನ್ನು ಅನ್ಯರಿಗೆ ಕೊಟ್ಟ ತಪ್ಪಿಗೆ ಅಮಾನತುಗೊಂಡಿದ್ದಾರೆ. ಅರಕಲಗೂಡು ತಾಲ್ಲೂಕು ದೊಡ್ಡಬೆಮ್ಮತ್ತಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ವಾರ್ಡನ್ ಆನಂದ್ ಹಾಗೂ ಬೇಲೂರು ತಾಲ್ಲೂಕು ಹಳೇಬೀಡು ಹಾಸ್ಟೆಲ್‌ನ ರಮೇಶ್ ಅವರನ್ನು ಅಮಾನತು ಮಾಡಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಆದೇಶಿಸಿದ್ದಾರೆ. ಸುಗಮ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ವಿವಿಧ ಇಲಾಖೆ ನೌಕರರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಅದೇ ರೀತಿ ವಾರ್ಡನ್‌ಗಳು ಶುಕ್ರವಾರ ಸ್ವಚ್ಛತಾ ಮೇಲ್ವಿಚಾರಣೆಗೆ ನಿಯೋಜನೆಗೊಂಡಿದ್ದರು. ಆದರೆ ಅವರ ಗುರುತಿನ ಚೀಟಿ ಹಾಕಿಕೊಂಡು ಅನ್ಯರು ದೇವಾಲಯ ಪ್ರವೇಶಿಸಿದ್ದರು. ಅದನ್ನು ಗಮನಿಸಿದ ಪೊಲೀಸರು ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದರು.

## ಹಾಸನಾಂಬ ಜಾತ್ರೆಯಲ್ಲಿ ಸ್ಕೌಟ್ಸ್ ಗೈಡ್ಸ್ ಸೇವೆ ಶ್ಲಾಘನೀಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಕ್ತಿದೇವತೆ ಹಾಸನಾಂಬ ಹಾಗೂ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಸ್ವಯಂ ಪ್ರೇರಿತ ಸೇವೆ ಸಲ್ಲಿಸಲು ಅನೇಕ ಸಂಘ ಸಂಸ್ಥೆಗಳು ಮುಂದೆ ಬಂದರೂ ಜಿಲ್ಲಾಡಳಿತ ಕಳೆದ 15 ವಷಗಳಿಂದ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಬಿರಾರ್ಥಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವುದಕ್ಕೆ ಪ್ರತಿಯೊಬ್ಬ ಶಿಬಿರಾರ್ಥಿ ಸಲ್ಲಿಸುವ ಸೇವೆಯೇ ಕಾರಣವಾಗಿದೆ.




13 ವರ್ಷಗಳ ಹಿಂದೆ ಕೇವಲ 10 ಏಕಲವ್ಯ ರೋವರ್ಸ್‌ಗಳು ಸೇವೆಗಾಗಿ ನಿಯೋಜನೆಗೊಂಡಿದ್ದರು. ಪ್ರಸ್ತುತ ಅವರ ಸಂಖ್ಯೆ 700ಕ್ಕೆ ತಲುಪಿದ್ದು ಹಾಸನ ಮಾತ್ರವಲ್ಲದೆ ರಾಜ್ಯದ 11 ಜಿಲ್ಲೆಗಳಿಂದ ಶಿಬಿರಾರ್ಥಿಗಳು ಬಂದಿದ್ದಾರೆ. ದಿನಕ್ಕೆ ಎರಡು ಪಾಳಿಯಲ್ಲಿ 350ರಂತೆ ಶಿಬಿರಾರ್ಥಿಗಳು ಹಾಸನಾಂಬ ಮಹೋತ್ಸವದಲ್ಲಿ ಸೇವೆ ಒದಗಿಸುತ್ತಿದ್ದಾರೆ.

ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ ಅವರ ಮಾರ್ಗದರ್ಶನದಲ್ಲಿ ಪ್ರತಿಯೊಬ್ಬರು ಶ್ರದ್ಧೆಯಿಂದ ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಪಾಲಿಸುತ್ತಿದ್ದಾರೆ. ಹಾಸನಾಂಬ ಜಾತ್ರೆ 2ನೇ ದಿನದ ಉತ್ಸವದಲ್ಲಿ ಎರಡು ಪಾಳಿಯಲ್ಲಿ ಕರ್ತವ್ಯಕ್ಕೆ ನಿಯುಕ್ತಿಗೊಂಡ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಸರದಿ ಸಾಲಿನಲ್ಲಿ ಸಾಗುವ ಭಕ್ತಾದಿಗಳಿಗೆ ಕುಡಿಯುವ ನೀರು ವಿತರಣೆ, ಅಂಗವಿಕಲರು, ವಯೋವೃದ್ಧರನ್ನು ಗಾಲಿ ಕುರ್ಚಿಯಲ್ಲಿ ಕೂರಿಸಿ ದೇವಿಯ ದರ್ಶನ ಮಾಡಿಸುವುದು, ಸಾಲಿನಲ್ಲಿ ಬರುವ ಭಕ್ತಾದಿಗಳನ್ನು ಸಂತೈಸಿ ಸಮಾಧಾನಿಸುತ್ತ ಮುಂದೆ ಕಳಿಸುವುದು, ಕೌಂಟರ್‌ನಲ್ಲಿ ಪ್ರಸಾದ ವಿತರಣೆ, ಆಹಾರ ಪೋಲಾಗದಂತೆ ತಡೆಯುವಿಕೆ ಮುಂತಾದ ಕೆಲಸಗಳಲ್ಲಿ ಮಕ್ಕಳು ಸಂತೋಷದಿಂದ ತೊಡಗಿದ್ದಾರೆ.

ಸ್ಕೌಟ್ಸ್ ಅಂಡ್ ಗೈಡ್ಸ್ ರಾಜ್ಯ ಸಹ ಕಾರ್ಯದರ್ಶಿ ಎಲ್.ಟಿ. ಲೋಕೇಶ್ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ಕಾರ್ಯದರ್ಶಿ, ಸಂಘಟಕಿ ಪ್ರಿಯಾಂಕ, ಆರ್.ಜಿ. ಗಿರೀಶ್, ಹಲವು ಜಿಲ್ಲಾ ಸ್ಕೌಟ್ಸ್ ಅಂಡ್ ಗೈಡ್ಸ್ ನಾಯಕರ ನೆರವಿನೊಂದಿಗೆ ರಾಜ್ಯ ಮಟ್ಟದ ಸೇವಾ ಶಿಬಿರ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಕ್ತಾದಿಗಳು ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳ ಸೇವೆಗೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

# ಕುಡಿಯುವ ನೀರಿನ ಯೋಜನೆಗೆ 5 ಲಕ್ಷ ರೂ.

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಳೇಬೀಡು: ಅಸಂಖ್ಯಾತ ಭಕ್ತರನ್ನು ಹೊಂದಿರುವ ಪುಷ್ಪಗಿರಿ ಕ್ಷೇತ್ರದ ಅಭಿವೃದ್ಧಿಗೆ ನಾವು ಕೈಜೋಡಿಸಿದ್ದೇವೆ. ಪುಷ್ಪಗಿರಿ ಬೆಟ್ಟದಲ್ಲಿ 5 ಲಕ್ಷ ರೂ. ವೆಚ್ಚದ ಕುಡಿಯುವ ನೀರಿನ ಯೋಜನೆ ಕೈಗೊಳ್ಳಲು ಹಣ ಮಂಜೂರು ಮಾಡಿಸಿದ್ದೇವೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು. ಪುಷ್ಪಗಿರಿಯಲ್ಲಿ ಹಮ್ಮಿಕೊಂಡಿದ್ದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಪಾರ್ವತಮ್ಮ ದೇವಾಲಯದ ದಾಸೋಹ ಭವನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿನಂತೆ ಪುಷ್ಪಗಿರಿ ದೇವಾಲಯದ ಭಕ್ತರು ಹಾಗೂ ಮಠದವರು ಕ್ಷೇತ್ರದ ಪ್ರಗತಿಯತ್ತ ಹೆಜ್ಜೆ ಇಡಬೇಕು. ಪುಷ್ಪಗಿರಿ ಕ್ಷೇತ್ರ ಹೊಯ್ಸಳರ ಇತಿಹಾಸದೊಂದಿಗೆ ಬೆಸೆದುಕೊಂಡಿದೆ. 900 ವರ್ಷ ಇತಿಹಾಸ ಹೊಂದಿರುವ ಕ್ಷೇತ್ರ 3 ದಶಕದಿಂದ ಸಾಕಷ್ಟು ಪ್ರಗತಿ ಕಂಡಿದೆ. ಭಕ್ತರು ಸಹಕಾರದಿಂದ ಸುಸಜ್ಜಿತ ದಾಸೋಹ ಭವನ ನಿರ್ಮಾಣ ಆಗಿರುವುದು ಶ್ಲಾಘನೀಯ ಎಂದು ಸುರೇಶ್ ಹೇಳಿದರು. ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ ಸ್ವಾಮೀಜಿ ಮಾತನಾಡಿ, ಹಳೇಬೀಡು ವಿಶ್ವಪರಂಪರೆ ತಾಣವಾಗಿದೆ. ಆದರೆ ಮೂಲಸೌಲಭ್ಯ ದೊರಕಿಸಲು ಸ್ಥಳಾವಕಾಶದ ಕೊರತೆಯಾಗಿದೆ. ಹಳೇಬೀಡಿಗೆ ಆಗಮಿಸುವ ಪ್ರವಾಸಿಗರನ್ನು ಸಂತೈಸುವಂತಹ ಅಂತಾರಾಷ್ಟ್ರೀಯ ಕ್ಷೇತ್ರವಾಗಿ ಪುಷ್ಪಗಿರಿ ಬೆಳೆಯಬೇಕು. ಜನರು ಗಳಿಸಿದ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನಾದರೂ ಸಮಾಜಕ್ಕೆ ಅರ್ಪಿಸಿದರೆ ಬದುಕು ಸಾರ್ಥಕವಾಗುತ್ತದೆ. ಧಾರ್ಮಿಕ ಸಂಘಟನೆ ಇದ್ದರೆ ಮಾತ್ರ ಜನರು ಶಾಂತಿ ಸುವ್ಯವಸ್ಥೆಯಿಂದ ಬದುಕುತ್ತಾರೆ. ಭಕ್ತರು ಸಂಘಟಿತರಾಗಿದ್ದರಿಂದ ಪುಷ್ಪಗಿರಿಯಲ್ಲಿ ದಾಸೋಹ ಭವನ ತಲೆ ಎತ್ತಿ ನಿಂತಿದೆ. ಪುಷ್ಪಗಿರಿ ಭಕ್ತರ ಶ್ರಮದಿಂದ ಕ್ಷೇತ್ರದ ದೇವಾಲಯಗಳು ಜೀರ್ಣೋದ್ದಾರ ಕಂಡಿವೆ. ಪುಷ್ಪಗಿರಿ ದೇವಾಲಯದ ದಾಸೋಹಕ್ಕೆ ಪ್ರತಿದಿನ 50000 ರೂ. ವರೆಗೂ ಹಣ ವೆಚ್ಚವಾಗುತ್ತದೆ. ಹುಟ್ಟಿದ ಹಬ್ಬ ಮೊದಲಾದ ಸಂದರ್ಭದಲ್ಲಿ ಅನಗತ್ಯ ವೆಚ್ಚ ಮಾಡುವ ಬದಲು ಸಂಬಂಧಿಸಿದ ದಿನಾಂಕದಂದು ಭಕ್ತರು ದಾಸೋಹ ವಹಿಸಿಕೊಳ್ಳಬಹುದು ಎಂದು ಸ್ವಾಮೀಜಿ ಹೇಳಿದರು. 50ಕ್ಕೂ ಹೆಚ್ಚು ಮಂದಿ ಒಂದೊಂದು ದಿನದ ದಾಸೋಹದ ಖರ್ಚನ್ನು ವಹಿಸಿಕೊಂಡರು.

ದಾಸೋಹ ಸಮಿತಿ ಅಧ್ಯಕ್ಷ ಎಂ.ವಿ. ಸೋಮಸುಂದರ್ ಮಾತನಾಡಿ, ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿಯನ್ನು ಮನೆ ದೇವರೆಂದು ನಂಬಿದವರು ದೇಶದ ವಿವಿಧೆಡೆ ನೆಲೆಸಿದ್ದಾರೆ. ಈಗ ವಿದೇಶದಲ್ಲಿಯೂ ಭಕ್ತರಿದ್ದಾರೆ ಎಂದರು.

ಕೋಳಗುಂದ ಕೇದಿಗೆ ಮಠದ ಜಯಚಂದ್ರ ಶೇಖರ ಸ್ವಾಮೀಜಿ ಆಶೀರ್ವಚನ ನೀಡಿದರು. ದಾಸೋಹ ಸಮಿತಿ ಕಾರ್ಯದರ್ಶಿ ಜಿ. ಸಂಗಮ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಸ್ವಾತಂತ್ರ್ಯ ಹೋರಾಟಗಾರ ಎಸ್.ಎಂ.ಬಸವರಾಜಪ್ಪ, ಪುಷ್ಪಗಿರಿ ಮಠದ ಕಾರ್ಯದರ್ಶಿ ಗ್ರಾನೈಟ್ ರಾಜಶೇಖರ್, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ತಾಲ್ಲೂಕು ಅಧ್ಯಕ್ಷ ಎಂ.ಎಸ್.ಬಸವರಾಜು, ಸಮಾಜ ಮುಖಂಡರಾದ ಡಾ.ಶಿವಪ್ಪ, ಬಿ.ಡಿ.ಬಸವಣ್ಣಪ್ಪ, ಸಿ.ಎನ್.ರವಿ, ಬೇಲೂರು ಶಿವಕುಮಾರ ಸ್ವಾಮೀಜಿ ಟ್ರಸ್ಟ್ ಕಾರ್ಯಾಧ್ಯಕ್ಷ ಧರಣೇಂದ್ರ, ಗ್ರಾಮ ಪಂಚಾಯಿತಿ ಅಧ್ಯಕ್ಷ ಮೋಹನ್ ಕುಮಾರ್, ಪಿಡಿಒ ರಘುನಾಥ್, ಮಿಲ್ ಮಲ್ಲಣ್ಣ, ಶಂಭುಗನಹಳ್ಳಿ ಓಂಕಾರಪ್ಪ ಪಾಲ್ಗೊಂಡಿದ್ದರು. ಹೆಬ್ಬಾಳು ಭುವನೇಶ್ ನಿರೂಪಿಸಿದರು.

# ಹದಗೆಟ್ಟ ರಸ್ತೆ-ವಾಹನ ಸವಾರರಿಗೆ ಸಂಕಟ



ಬೇಲೂರು: ಬೇಲೂರು ಹಾಗೂ ಬಿಕ್ಕೋಡು ನಡುವಿನ ರಸ್ತೆಯು ತುಂಬಾ ಹದಗೆಟ್ಟಿದ್ದು ವಾಹನ ಸವಾರರು ಹರಸಾಹಸ ಪಡುತ್ತಿದ್ದಾರೆ.

ಇದೇ ರಸ್ತೆಯಲ್ಲಿ ಕುಶಾವರದ ನಿವಾಸಿಗಳಾದ ನರೇಂದ್ರ ಹಾಗೂ ಸುರೇಶ್ ಬೇಲೂರಿಗೆ ಕೆಲಸದ ನಿಮಿತ್ತ ಬೈಕಿನಲ್ಲಿ ಬರುವಾಗ ತಗರೆ ಸಮೀಪ ಗುಂಡಿಯನ್ನು ತಪ್ಪಿಸಲು ಹೋಗಿ ಬೈಕ್ ಸಮೇತ ಬಿದ್ದು ಕೈ ಕಾಲುಗಳಿಗೆ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಬೇಲೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿಸಲಾಗಿದೆ. ಕುಶಾವರದ ಸುರೇಶ್ ಮಾತನಾಡಿ, ಈ ರಾಜ್ಯ ಹೆದ್ದಾರಿಯೂ ಗುಂಡಿಗಳಿಂದ ತುಂಬಿ ಹೋಗಿ ಬಹಳ ವರ್ಷಗಳಾಗಿದೆ. ಈ ರಸ್ತೆಯಲ್ಲಿ ವಾಹನ ಸವಾರರು ಸಂಚರಿಸಲ ಹರಸಾಹಸ ಪಡಬೇಕು. ದಿನನಿತ್ಯ ಈ ರಸ್ತೆಯಲ್ಲಿ ಒಂದಲ್ಲ ಒಂದು ಸಣ್ಣ ಸಣ್ಣ ಅಪಘಾತಗಳು ಆಗುತ್ತಲೇ ಇವೆ. ಇನ್ನಾದರೂ ಜನಪ್ರತಿನಿಧಿಗಳು, ಶಾಸಕರು, ಈ ರಸ್ತೆಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿಸಿದರೆ ಸಂಚರಿಸಲು ಅನುಕೂಲವಾಗುತ್ತದೆ. ಇಲ್ಲವಾದರೆ ರಸ್ತೆ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ತಗರೆ ಗ್ರಾಮದ ನರೇಂದ್ರ, ಚಂದ್ರಶೇಖರ್, ಆಕಾಶ್ ಲೋಕೇಶ್, ರಮೇಶ್ ಇತರರಿದ್ದರು.

# ರಾಜ್ಯ ಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟ ಯಶಸ್ವಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಡಿಸೆಂಬರ್‌ನಲ್ಲಿ ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟವನ್ನು ಹಾಸನದಲ್ಲಿ ಆಯೋಜಿಸಲಾಗುವುದು ಎಂದು ಆದಿಚುಂಚನಗಿರಿ ಶಾಖಾ ಮಠಾಧೀಶ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಬಿಜಿಎಸ್ ಸಮುದಾಯ ಭವನದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವತಿಯಿಂದ ಎರಡು ದಿನ ದೈಹಿಕ ಶಿಕ್ಷಣ ನಿರ್ದೇಶಕರಿಗೆ ಏರ್ಪಡಿಸಿದ್ದ ತರಬೇತಿ ಹಾಗೂ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

ಕ್ರೀಡಾಕೂಟದ ಉದ್ಘಾಟನೆಗೆ ಅಂತರರಾಷ್ಟ್ರೀಯ ಆಟಗಾರರನ್ನು ಆಹ್ವಾನಿಸಲಾಗುವುದು. ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಉತ್ತಮ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕ್ರೀಡಾ ಸಾಧಕರನ್ನು ಸನ್ಮಾನಿಸಲಾಗುವುದು. ಟೂರ್ನಿ ಯಶಸ್ಸಿಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ದೈಹಿಕ ಶಿಕ್ಷಣ ವಿಭಾಗ ಶಿಕ್ಷಣ ಕ್ಷೇತ್ರದ ಒಂದು ಪ್ರಮುಖ ಭಾಗ. ಶಿಕ್ಷಣ ಮತ್ತು ಕ್ರೀಡೆ ಎರಡು ಕಣ್ಣುಗಳಿದ್ದಂತೆ. ಮಕ್ಕಳಲ್ಲಿರುವ ಪ್ರತಿಭೆ ಹೊರತರಲು ದೈಹಿಕ ಶಿಕ್ಷಣ ನಿರ್ದೇಶಕರ ಶ್ರಮ ಸಾಕಷ್ಟಿದೆ. ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಕಾಪಾಡಿಕೊಂಡು ಬರಲು ಕ್ರೀಡೆಗಳು ಸಹಕಾರಿಯಾಗಿದೆ. ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿ ಅವರ ದೂರದೃಷ್ಟಿಯಿಂದ ಶಿಕ್ಷಣ ಮತ್ತು ಕ್ರೀಡೆಗೆ ವಿದ್ಯಾರ್ಥಿಗಳನ್ನು ತೊಡಗಿಸಬೇಕು ಎಂಬ ಆಶಯದಿಂದ ಆದಿಚುಂಚನಗಿರಿ ಮಠದಿಂದ ರಾಜ್ಯಮಟ್ಟದ ಕ್ರೀಡಾಕೂಟ ಏರ್ಪಡಿಸಲಾಗುತ್ತಿದೆ. ದೈಹಿಕ ಶಿಕ್ಷಣ ನಿರ್ದೇಶಕರಲ್ಲಿ ಕ್ಷಮತೆ ಹೆಚ್ಚಿಸಲು ಎರಡು ದಿನ ಕಾರ್ಯಾಗಾರ ಏರ್ಪಡಿಸಲಾಗಿತ್ತು ಎಂದು ಹೇಳಿದರು.

ಮಕ್ಕಳಿಗೆ ಯಾವ ಕ್ರೀಡೆಯಲ್ಲಿ ಆಸಕ್ತಿ ಇದೆ ಎಂಬುದನ್ನು ತಿಳಿದುಕೊಂಡು ಸೂಕ್ತ ತರಬೇತಿ ನೀಡಿದರೆ, ಕ್ರೀಡಾ ಲೋಕದಲ್ಲಿ ಸಾಧನೆ ಮಾಡಲು ಅನುಕೂಲವಾಗುತ್ತದೆ. ಉತ್ತಮ ಕ್ರೀಡಾಪಟುಗಳಾಗಿ ಹೊರಹೊಮ್ಮಿದ್ದಾಗ ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ದೊರಕುತ್ತದೆ ಎಂದು ನುಡಿದರು.

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಮಂಗಳನಾಥ ಸ್ವಾಮೀಜಿ, ದಸರಿಘಟ್ಟದ ಚಂದ್ರಶೇಖರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಎರಡು ದಿನ ನಡೆದ ತರಬೇತಿ ಮತ್ತು ಕಾರ್ಯಾಗಾರದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಎ.ಟಿ. ಶಿವರಾಂ, ಎನ್. ಶಿವರಾಮ ರೆಡ್ಡಿ, ಯೋಗ ಗುರು ಎಸ್. ಪ್ರಸಾದ್, ಸಂಪನ್ಮೂಲ ವ್ಯಕ್ತಿಗಳಾದ ಮೊಹಮ್ಮದ್ ಇಸ್ಮಾಯಿಲ್ ಲತೀಫ್, ಎಸ್.ಎನ್. ರಮೇಶ್, ಸಿ.ಎನ್. ವಿಶ್ವನಾಥ್, ವಸಂತ್ ಕುಮಾರ್ ಪಾಲ್ಗೊಂಡಿದ್ದರು.

# ಹಾಸನದಲ್ಲಿ ಮೇಳೈಸಿದ ಜಾನಪದ ಜಾತ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಶಕ್ತಿ ದೇವತೆ ಹಾಸನಾಂಬ ದರ್ಶನೋತ್ಸವ ಮತ್ತು ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಜಾನಪದ ಜಾತ್ರೆ ಜಿಲ್ಲೆಯ ಜನರಿಗೆ ಜಾನಪದ ರಸದೌತಣ ಉಣಬಡಿಸುತ್ತಿದೆ.

ಹೇಮಾವತಿ ಪ್ರತಿಮೆ ಮುಂಭಾಗದಲ್ಲಿ ನಿರ್ಮಾಣಗೊಂಡಿರುವ ವೇದಿಕೆಯಲ್ಲಿ ಗುರುವಾರ ಸಂಜೆ ಜಾನಪದ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆಗೊಂಡಿದ್ದು, ಅ.21ರ ವರೆಗೂ ಪ್ರತಿದಿನ ಜಾನಪದ ಕಲಾ ವೈಭವ ನಡೆಯಲಿದೆ.

ಸ್ಥಳೀಯ ಕಲಾವಿದರು, ಶಾಲಾ-ಕಾಲೇಜು ಯುವಕ-ಯುವತಿಯರು ಮಾತ್ರವಲ್ಲದೇ ರಾಜ್ಯದ ನಾನಾ ಜಿಲ್ಲೆಗಳ ಪ್ರಸಿದ್ಧ ಜಾನಪದ ಕಲಾ ತಂಡಗಳು ತಮ್ಮ ಕಲೆ, ನೃತ್ಯ, ನಾಟಕ ಪ್ರದರ್ಶನಕ್ಕೆ ವೇದಿಕೆಯಾಗಿದೆ.

ಜಾನಪದ ಜಾತ್ರೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿ ಮಾತನಾಡಿ, ಹಾಸನಾಂಬ ಜಾತ್ರೆಯೊಂದಿಗೆ ಸಾಂಸ್ಕೃತಿಕ ಉತ್ಸವವೂ ನಡೆಯುತ್ತಿದೆ. ರಾಜ್ಯದ ಮೂಲೆ ಮೂಲೆಯಲ್ಲಿರುವ ಜಾನಪದ ಕಲಾವಿದರನ್ನು ಹಾಸನಕ್ಕೆ ಆಹ್ವಾನಿಸಿ, ಹಾಸನ ಜನರಿಗೆ ಮತ್ತು ಹಾಸನಾಂಬ ದರ್ಶನಕ್ಕೆ ಬರುವ ಭಕ್ತರಿಗೆ ಜಾನಪದ ಅಭಿರುಚಿ ಮತ್ತು ಮನರಂಜನೆ ಕೊಡಬೇಕೆಂಬ ಉದ್ದೇಶದಿಂದ ಜಾನಪದ ಕಲಾವಿದರನ್ನು ಕರೆಸಿದ್ದೇವೆ. ಇದರಿಂದ ಜಾನಪದ ಕಲೆಯನ್ನು ಉಳಿಸಿ, ಬೆಳೆಸುವ ಕೆಲಸವನ್ನು ಹಾಸನಾಂಬ ಉತ್ಸವದಲ್ಲಿ ಮಾಡಲಾಗುತ್ತಿದೆ ಎಂದು ಹೇಳಿದರು.

ಬರುವ 10 ದಿನಗಳ ಕಾಲವೂ ವಿಭಿನ್ನ ಕಾರ್ಯಕ್ರಮ, ನಾಟಕ, ಭಜನೆ, ಸ್ಥಳೀಯ ಯುವಕ-ಯುವತಿಯರಿಂದ ಸಾಂಸ್ಕೃತಿಕಗಳು ನಿರಂತರವಾಗಿ ನಡೆಸುವ ಮೂಲಕ ಸಾಸ್ಕೃತಿಕ ಹಬ್ಬವನ್ನು ಆಚರಿಸಿ, ಜನರಿಗೆ ರಸದೌತಣ ನೀಡುವ ಮೂಲಕ ನಮ್ಮ ನಾಡಿನ ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸ ಮಾಡಲಾಗುವುದು. ಈ ಕಾರ್ಯಕ್ರಮದಿಂದ ಹಾಸನಾಂಬ ಉತ್ಸವ ಇನ್ನಷ್ಟು ವೈಭವಪೂರಿತವಾಗಲಿ ಎಂಬುದು ನಮ್ಮ ಆಶಯ ಎಂದು ಹೇಳಿದರು.

ಗೃಹಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜಿತಾ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ ಮತ್ತಿತರರು ಹಾಜರಿದ್ದರು. ಜಾನಪದ ನೃತ್ಯಕ್ಕೆ ಸಚಿವರು ಹಾಗೂ ಇತರ ಜನಪ್ರತಿನಿಧಿಗಳು ಹೆಜ್ಜೆ ಹಾಕಿದರು.

# ಅಭಿವೃದ್ಧಿಗೆ ಸಾರ್ವಜನಿಕರ ಸಹಕಾರವೂ ಮುಖ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಎಲ್ಲರೂ ಕೈಜೋಡಿಸಿದರೆ ತಾಲ್ಲೂಕಿನ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಹೆಚ್.ಕೆ. ಸುರೇಶ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ದಬ್ಬೆ ಗಡಿಯಲ್ಲಿ ಹಮ್ಮಿಕೊಂಡಿದ್ದ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ದಬ್ಬೆ ಗಡಿಯಿಂದ ಕನ್ನಾಪುರ ಸೇರುವ ರಸ್ತೆವರೆಗೆ ಒಂದು ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ. ಸದ್ಯದಲ್ಲೇ ಕಾಮಗಾರಿ ಪ್ರಾರಂಭವಾಗುವುದು. ಈ ರಸ್ತೆ ಅಭಿವೃದ್ಧಿಯಿಂದ ಸುಮಾರು 30 ಹಳ್ಳಿಗಳಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ. ನಾನು

ಚುನಾವಣಾ ಪ್ರಚಾರದ ವೇಳೆಯೇ ತಾಲ್ಲೂಕಿನ ಜ್ವಲಂತ ಸಮಸ್ಯೆಗಳ ಕುರಿತು ತಿಳಿದುಕೊಂಡಿದ್ದೆ. ಇದೀಗ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವತ್ತ ಮತ್ತು ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಯತ್ತ ಹೆಚ್ಚು ಗಮನ ಹರಿಸಲಾಗಿದೆ. ಮಲೆನಾಡು ಭಾಗದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಶೀಘ್ರದಲ್ಲೇ ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಅನುದಾನ ತಂದು ಅಭಿವೃದ್ಧಿ ಪಡಿಸಲಾಗುವುದು. ಗ್ರಾಮದ ಜನರ ಸಹಕಾರವೊಂದನ್ನೇ ನಾನು ನಿರೀಕ್ಷಿಸುತ್ತಿದ್ದು, ತಾಲ್ಲೂಕಿನ ಅಭಿವೃದ್ಧಿಗೆ ನನ್ನದೇ ಆದ ಆಲೋಚನೆಗಳನ್ನು ಹೊಂದಿದ್ದೇನೆ ಎಲ್ಲರ ಸಹಕಾರವಿರಲಿ. ಎಲ್ಲರ ಜೊತೆಗೂಡಿ ಅಭಿವೃದ್ಧಿ ಕಾಣೋಣ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಚೇತನ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಕೃಷ್ಣೇಗೌಡ, ಗ್ರಾಮದ ರಮೇಶ್, ಸುಂದರೇಶ್, ಯುವರಾಜು, ಯೋಗೀಶ್ ಗೌಡ, ಸಂಪತ್, ಹೆಗಡೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಾಸು, ರೇವತಿ ಹಾಗೂ ಇತರರಿದ್ದರು.

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್-11

1138: ಸಿರಿಯಾದಲ್ಲಿ ಭಾರೀ ಭೂಕಂಪ ಸಂಭವಿಸಿ ಲಕ್ಷಾಂತರ ಜನರು ಸಾವನ್ನಪ್ಪಿದರು.
1899: ದ್ವಿತೀಯ ಬೋರ್ ಯುದ್ಧ ಆರಂಭವಾಯಿತು. (ಬ್ರಿಟನ್ ಮತ್ತು ದಕ್ಷಿಣ ಆಫ್ರಿಕಾದ ಬೋರ್ ಗಣರಾಜ್ಯಗಳ ನಡುವೆ)
1968: ಅಪೋಲೋ 7 ನೌಕೆ ಯಶಸ್ವಿಯಾಗಿ ಉಡಾವಣೆಯಾಯಿತು. ಇದು ಅಮೆರಿಕಾದ ಅಪೋಲೋ ಯೋಜನೆಯ ಮೊದಲ ಮಾನವಯಾನ ಪ್ರಯೋಗವಾಗಿತ್ತು.
1975: ಅಮೇರಿಕಾದ Saturday Night Live ಕಾರ್ಯಕ್ರಮದ ಮೊದಲ ಪ್ರಸಾರ ನಡೆಯಿತು.
1982: ಅಂತಾರಾಷ್ಟ್ರೀಯ ಖಗೋಳ ವಿಜ್ಞಾನ ಕೇಂದ್ರವು ಅಕ್ಯಾಟ್ಸ್ ಐ ನೆಬ್ಯುಲಾ ಹೊಸ ಚಿತ್ರಗಳನ್ನು ಬಿಡುಗಡೆ ಮಾಡಿತು.
2002: ಬಾಲಿ ದ್ವೀಪದಲ್ಲಿ ಉಗ್ರ ದಾಳಿ, 200ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದರು.

**ಜನನ**

1884: ಎಲೆನರ್ ರೂಸವೆಲ್ಟ್, ಅಮೇರಿಕಾದ ಮಾಜಿ ಫಸ್ಟ್ ಲೇಡಿ ಮತ್ತು ಮಾನವ ಹಕ್ಕುಗಳ ಹೋರಾಟಗಾರ್ತಿ
1902: ಜಮ್ನಾಲಾಲ್ ಬಜಾಜ್, ಭಾರತೀಯ ಉದ್ಯಮಿ ಮತ್ತು ಸ್ವಾತಂತ್ರ್ಯ ಹೋರಾಟಗಾರ
1942: ಅಮಿತಾಭ್ ಬಚ್ಚನ್, ಭಾರತೀಯ ಚಲನಚಿತ್ರ ನಟ ಮತ್ತು ಹಿಂದಿ ಚಿತ್ರರಂಗದ ದಿಗ್ಗಜ
1965: ಲೆನೊಕ್ಸ್ ಲ್ಯೂಯಿಸ್, ಪ್ರಸಿದ್ಧ ಬಾಕ್ಸರ್

**ಮರಣ**

1889: ಜೇಮ್ಸ್ ಪ್ರೆಸ್ಕಾಟ್ ಜೂಲ್, ಇಂಗ್ಲಿಷ್ ಭೌತಶಾಸ್ತ್ರಜ್ಞ
1963: ಜೀನ್ ಕಾಕ್ಟೋ, ಫ್ರೆಂಚ್ ಕವಿ ಮತ್ತು ಚಲನಚಿತ್ರ ನಿರ್ದೇಶಕ
2011: ಜಗಜ್ಯೋತಿ ಬಾಬಾ ಪೇರಿಯಾರ್ ದಾಸನ್, ತಮಿಳು ಚಿಂತಕ ಮತ್ತು ಸಾಮಾಜಿಕ ಹೋರಾಟಗಾರ

# ರಾಷ್ಟ್ರದ ಹೆಮ್ಮೆ ರತನ್ ಟಾಟಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ನಮ್ಮ ದೇಶದ ಖ್ಯಾತ ಉದ್ಯಮಿ, ಸಹೃದಯದ ಮನುಷ್ಯ ಟಾಟಾ ಸಮೂಹದ ಮುಖ್ಯಸ್ಥರಾಗಿದ್ದ ರತನ್ ಟಾಟಾ ಬಗ್ಗೆ ಪ್ರತೀಕ್ಷಾ ಎಂ. ತಿವಾರಿ ಬರೆದ ಪುಸ್ತಕವು ಕನ್ನಡಕ್ಕೆ ಅನುವಾದಗೊಂಡಿದೆ. ಈ ಕೃತಿಯು ಬಹಳಷ್ಟು ಅಮೂಲ್ಯವಾದ ಮಾಹಿತಿಗಳನ್ನು ಒಳಗೊಂಡಿದ್ದರೂ ವಿಪರೀತ ಮುದ್ರಾರಾಕ್ಷಸನ ಹಾವಳಿಯಿಂದ ತತ್ತರಿಸಿಹೋಗಿದೆ. ಇಂಟರ್ನೆಟ್ ಸಾಫ್ಟ್‌ವೇರ್‌ಗಳ ಮೂಲಕ ಅನುವಾದ ಮಾಡಿರುವ ಕಾರಣದಿಂದ ಹಲವಾರು ತಪ್ಪುಗಳು ಕಂಡು ಬರುತ್ತಿವೆ. ವಾಕ್ಯ ರಚನೆಗಳೂ ಸರಿಯಾಗಿಲ್ಲ. ಸರಾಗವಾಗಿ ಓದಲೂ ಕಷ್ಟ.

1991ರಲ್ಲಿ ಜೆಆರ್ ಡಿ ಟಾಟಾ ನಿವೃತ್ತಿಯಾದಾಗಿನಿಂದ ಟಾಟಾ ಸಮೂಹದ ಉತ್ತುಂಗದಲ್ಲಿ, ನೌಕಾಪಡೆ ಎಚ್. ಟಾಟಾ ಅವರ ಪುತ್ರ ಶ್ರೀ ರತನ್ ನೇವಲ್ ಟಾಟಾ ಅವರು ಟಾಟಾ ಸಮೂಹವನ್ನು ಜಾಗತಿಕ ಆಟಗಾರರನ್ನಾಗಿ ಹೊರಹೊಮ್ಮಿಸಿದ್ದಾರೆ. ಫೋರ್ಟ್ಸ್ ಏಷ್ಯಾದ ಜನವರಿ 10,2005 ರ ಸಂಚಿಕೆಯಲ್ಲಿ, ರತನ್ ಟಾಟಾ ಅವರನ್ನು ಏಷ್ಯಾದ ವರ್ಷದ ಉದ್ಯಮಿ ಎಂದು ಹೆಸರಿಸಲಾಯಿತು. ಶ್ರೀ ರತನ್ ಟಾಟಾ ಅವರ ಮಾರ್ಗದರ್ಶನದಲ್ಲಿ, ಟಾಟಾ ಗ್ರೂಪ್ ವೇಗವಾಗಿ ಬೆಳೆದಿದೆ ಮತ್ತು ಹೊಸ ಕೈಗಾರಿಕೆಗಳು ಮತ್ತು ವ್ಯವಹಾರದ ಕ್ಷೇತ್ರಗಳಿಗೆ ಕಾಲಿಟ್ಟಿದೆ. ಶ್ರೀ ರತನ್ ಎನ್. ಟಾಟಾ ಅವರು ಟಾಟಾ ಸಮೂಹದ ಹಿಡುವಳಿ ಕಂಪನಿಯಾದ ಟಾಟಾ ಸನ್ಸ್ ಲಿಮಿಟೆಡ್ ನ ಅಧ್ಯಕ್ಷರಾಗಿದ್ದಾರೆ ಮತ್ತು ಪ್ರಮುಖ ಟಾಟಾ ಆಪರೇಟಿಂಗ್ ಕಂಪನಿಗಳ ಅಧ್ಯಕ್ಷರಾಗಿದ್ದಾರೆ. ಇದರ ಜೊತೆಗೆ, ರತನ್ ಟಾಟಾ ಅವರು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕೇಂದ್ರ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಪ್ರಧಾನ ಮಂತ್ರಿಗಳ ವ್ಯಾಪಾರ ಮತ್ತು ಕೈಗಾರಿಕಾ ಮಂಡಳಿಯಲ್ಲಿದ್ದಾರೆ. ಅವರು ಇತ್ತೀಚೆಗೆ ಭಾರತ ಸರ್ಕಾರದೊಂದಿಗೆ ಸ್ಥಾಪಿಸಿದ ಹೂಡಿಕೆ ಆಯೋಗದ ಮುಖ್ಯಸ್ಥರೂ ಆಗಿದ್ದಾರೆ.

ರತನ್ ಟಾಟಾ ಅವರ ವೈಯಕ್ತಿಕ ಜೀವನ ಮತ್ತು ವೃತ್ತಿಪರ ವೃತ್ತಿಜೀವನದಲ್ಲಿ ಅವರು ಅದರ್ಶಪ್ರಾಯರಾಗಿದ್ದಾರೆ. ಅವರು ಭಾರತದ ಎರಡು ದೊಡ್ಡ ಖಾಸಗಿ ವಲಯದ ಲೋಕೋಪಕಾರಿ ಸಂಸ್ಥೆಗಳಾದ ಸರ್ ದೊರಬ್ಬಿ ಟಾಟಾ ಟ್ರಸ್ಟ್ ಮತ್ತು ಸರ್ ರತನ್ ಟಾಟಾ ಟ್ರಸ್ಟ್ ನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಫೋರ್ಡ್ ಪ್ರತಿಷ್ಠಾನದ ಟ್ರಸ್ಟಿಗಳ ಮಂಡಳಿ ಮತ್ತು ಬಿಲ್ ಮತ್ತು ಮೆಲಿಂಡಾ ಗೇಟ್ಸ್ ಪ್ರತಿಷ್ಠಾನದ ಇಂಡಿಯಾ ಏಡ್ ಇನಿಶಿಯೇಟಿವ್ ನ ಕಾರ್ಯಕ್ರಮ ಮಂಡಳಿಯ ಸದಸ್ಯರಾಗಿದ್ದಾರೆ.

ರತನ್ ಟಾಟಾ (ಡಿಸೆಂಬರ್ 28, 1937 ಗುಜರಾತ್‌ನ ಸೂರತ್‌ನಲ್ಲಿ) ಮುಂಬೈನ ಶ್ರೀಮಂತ ಮತ್ತು ಪ್ರಸಿದ್ಧ ಟಾಟಾ ಕುಟುಂಬದಲ್ಲಿ ಜನಿಸಿದರು. ಅವರು ಸೂನೂ ಮತ್ತು ನೇವಲ್ ಹಾರ್ಮುಸ್ಜಿ ಟಾಟಾ ಅವರಿಗೆ ಜನಿಸಿದರು. ರತನ್ ಟಾಟಾ ಸಮೂಹದ ಸಂಸ್ಥಾಪಕ ಜಡ್ಡಿ ಟಾಟಾ ಅವರ ಮೊಮ್ಮಗ. ರತನ್ ಅವರ ಬಾಲ್ಯವು ತೊಂದರೆಗೊಳಗಾಯಿತು, 1940 ರ ದಶಕದ ಮಧ್ಯಭಾಗದಲ್ಲಿ ಅವರ ಹೆತ್ತವರು ಬೇರ್ಪಟ್ಟರು, ಅವರು ಸುಮಾರು ಏಳು ವರ್ಷದವರಾಗಿದ್ದಾಗ ಮತ್ತು ಅವರ ಕಿರಿಯ ಸಹೋದರ ಜಿಮ್ಮಿ ಐದು ವರ್ಷದವರಾಗಿದ್ದಾಗ. ಅವರ ತಾಯಿ ಹೊರಟುಹೋದರು ಮತ್ತು ರತನ್ ಮತ್ತು ಅವರ ಸಹೋದರ ಇಬ್ಬರೂ ಅವರ ಅಜ್ಜಿ ಲೇಡಿ ನವಜ್ ಬಾಯಿ ಆರೈಕೆಯಲ್ಲಿ ಬೆಳೆದರು. ಅವರು ಮುಂಬೈನ ಕ್ಯಾಂಪಿಯನ್ ಶಾಲೆಯಲ್ಲಿ ಶಿಕ್ಷಣ ಪಡೆದರು ಮತ್ತು 1962ರಲ್ಲಿ ಕಾರ್ನೆಲ್ ವಿಶ್ವವಿದ್ಯಾಲಯದಿಂದ ಆರ್ಕಿಟೆಕ್ಚರ್ ಮತ್ತು ಸ್ಟ್ರಕ್ಚರಲ್ ಎಂಜಿನಿಯರಿಂಗ್ ಪದವಿ ಪಡೆದರು.

ರತನ್ ಟಾಟಾ ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದಿಂದ ರಚನಾತ್ಮಕ




ಎಂಜಿನಿಯರಿಂಗ್ ನಲ್ಲಿ ಬಿಎಸ್ಸಿ (ಆರ್ಕಿಟೆಕ್ಟ್) ಪದವಿಯನ್ನು ಪಡೆದಿದ್ದಾರೆ ಮತ್ತು ಅಮೆರಿಕದ ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ನಲ್ಲಿ ಅಡ್ವಾನ್ಸ್ ಮ್ಯಾನೇಜ್ ಮೆಂಟ್ ಪ್ರೋಗ್ರಾಂ ಅನ್ನು ಪೂರ್ಣಗೊಳಿಸಿದ್ದಾರೆ. ಜೆಆರ್ ಡಿ ಟಾಟಾ ಅವರ ಸಲಹೆಯ ಮೇರೆಗೆ ಐಬಿಎಂನೊಂದಿಗೆ ಉದ್ಯೋಗವನ್ನು ತಿರಸ್ಕರಿಸಿದ ನಂತರ ಅವರು ಡಿಸೆಂಬರ್ 1962ರಲ್ಲಿ ಟಾಟಾ ಗ್ರೂಪ್ ಗೆ ಸೇರಿದರು. ಟಾಟಾ ಸ್ಟೀಲ್ ನಲ್ಲಿ ಕೆಲಸ ಮಾಡಲು ಅವರನ್ನು ಮೊದಲು ಜಮ್ಶೆಡ್ ಪುರಕ್ಕೆ ಕಳುಹಿಸಲಾಯಿತು. ಅವರು ಇತರ ಬ್ಲೂ-ಕಾಲರ್ ಉದ್ಯೋಗಿಗಳೊಂದಿಗೆ ನೆಲದ ಮೇಲೆ ಕೆಲಸ ಮಾಡಿದರು. ಸುಣ್ಣದ ಕಲ್ಲನ್ನು ಒರೆಸುವುದು ಮತ್ತು ಬ್ಲಾಸ್ಟ್ ಫರ್ನೇಸ್ ಗಳನ್ನು ನಿರ್ವಹಿಸುವುದು. ನಾಚಿಕೆ ಸ್ವಭಾವದ ರತನ್ ಟಾಟಾ. ಸಮಾಜದ ಹೊಳಪಿನಡಿಯಲ್ಲಿ ವಿರಳವಾಗಿ ಕಾಣಿಸಿಕೊಳ್ಳುತ್ತಿದ್ದರು. ಮುಂಬೈನ ಕೊಲಾಬಾ ಜಿಲ್ಲೆಯಲ್ಲಿ ಪುಸ್ತಕ ತುಂಬಿದ, ನಾಯಿ ತುಂಬಿದ ಬ್ಯಾಚುಲರ್ ಫ್ಲಾಟ್ ನಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿದ್ದಾರೆ.

1971ರಲ್ಲಿ, ರತನ್ ಟಾಟಾ ಅವರನ್ನು ದಿ ನ್ಯಾಷನಲ್ ರೇಡಿಯೋ ಮತ್ತು ಎಲೆಕ್ಟ್ರಾನಿಕ್ಸ್ ಕಂಪನಿ ಲಿಮಿಟೆಡ್ () ನ ನಿರ್ದೇಶಕರಾಗಿ ನೇಮಿಸಲಾಯಿತು. ಗ್ರಾಹಕ ಎಲೆಕ್ಟ್ರಾನಿಕ್ಸ್ ಗೆ ಬದಲಾಗಿ ಉನ್ನತ ತಂತ್ರಜ್ಞಾನದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಕಂಪನಿಯು ಹೂಡಿಕೆ ಮಾಡಬೇಕು ಎಂದು ರತನ್ ಸಲಹೆ ನೀಡಿದರು. ನಿಯಮಿತ ಲಾಭಾಂಶವನ್ನು ಸಹ ಪಾವತಿಸದ ನೆಲ್ಲೊದ ಐತಿಹಾಸಿಕ ಆರ್ಥಿಕ ಕಾರ್ಯಕ್ಷಮತೆಯಿಂದಾಗಿ ಜೆಆರ್ ಡಿ ಹಿಂಜರಿಯುತ್ತಿತ್ತು. ಇದಲ್ಲದೆ, ಗ್ರಾಹಕ ಎಲೆಕ್ಟ್ರಾನಿಕ್ಸ್ ಮಾರುಕಟ್ಟೆಯಲ್ಲಿ ನೆಲ್ಲೊ 2% ಮಾರುಕಟ್ಟೆ ಪಾಲನ್ನು ಹೊಂದಿತ್ತು ಮತ್ತು ರತನ್ ವಹಿಸಿಕೊಂಡಾಗ ಮಾರಾಟದ 40% ನಷ್ಟವಿತ್ತು. ಅದೇನೇ ಇದ್ದರೂ, ಜೆ.ಆರ್.ಡಿ. ರತನ್ ಅವರ ಸಲಹೆಗಳನ್ನು ಅನುಸರಿಸಿತು.

1977ರಲ್ಲಿ, ರತನ್ ಟಾಟಾ ಅವರಿಗೆ ಟಾಟಾ ನಿಯಂತ್ರಿಸುವ ಜವಳಿ ಕಾರ್ಖಾನೆಯಾದ ಎಂಪ್ರೆಸ್ ಮಿಲ್ಸ್ ಅನ್ನು ವಹಿಸಲಾಯಿತು. ಅವರು ಕಂಪನಿಯ ಉಸ್ತುವಾರಿ ವಹಿಸಿಕೊಂಡಾಗ. ಇದು ಟಾಟಾ ಸಮೂಹದ ಕೆಲವೇ ಅನಾರೋಗ್ಯದ ಘಟಕಗಳಲ್ಲಿ ಒಂದಾಗಿತ್ತು. ರತನ್ ಟಾಟಾ ಅದನ್ನು ಸಂದರ್ಭ ಸಹಿತ ತಿರುಗಿಸುವಲ್ಲಿ ಯಶಸ್ವಿಯಾದರು ಮತ್ತು ಲಾಭಾಂಶವನ್ನು ಘೋಷಿಸಿದರು. ಅದಾಗ್ಯೂ, ಕಡಿಮೆ ಕಾರ್ಮಿಕ-ತೀವ್ರ ಉದ್ಯಮಗಳಿಂದ ಸ್ಪರ್ಧೆಯು ದೊಡ್ಡ ಕಾರ್ಮಿಕ ತುಕಡಿಗಳನ್ನು ಹೊಂದಿದ್ದ ಮತ್ತು ಆಧುನೀಕರಣಕ್ಕಾಗಿ ತುಂಬಾ ಕಡಿಮೆ ಖರ್ಚು ಮಾಡಿದ ಸಾಮ್ರಾಜ್ಞೆ ಸೇರಿದಂತೆ ಹಲವಾರು ಕಂಪನಿಗಳನ್ನು ಕಾರ್ಯಸಾಧ್ಯವಾಗುವಂತೆ ಮಾಡಿತು. ರತನ್ ಅವರ ಒತ್ತಾಯದ ಮೇರೆಗೆ, ಕೆಲವು ಹೂಡಿಕೆಗಳನ್ನು ಮಾಡಲಾಯಿತು. ಆದರೆ ಅದು ಸಾಕಾಗಲಿಲ್ಲ. ಒರಟಾದ ಮತ್ತು ಮಧ್ಯಮ ಹತ್ತಿಯ ಮಾರುಕಟ್ಟೆಯಾಗಿ ಬಟ್ಟೆ (ಸಾಮ್ರಾಜ್ಞೆ ಉತ್ಪಾದಿಸಿದ ಎಲ್ಲವೂ) ಪ್ರತಿಕೂಲವಾಯಿತು, ಸಾಮ್ರಾಜ್ಞೆ ಭಾರಿ ನಷ್ಟವನ್ನು ಸಂಗ್ರಹಿಸಲು ಪ್ರಾರಂಭಿಸಿದಳು. ಟಾಟಾ ಪ್ರಧಾನ ಕಚೇರಿಯಾಗಿರುವ ಬಾಂಬೆ ಹೌಸ್, ಇತರ ಸಮೂಹ ಕಂಪನಿಗಳಿಂದ ಹಣವನ್ನು ಬೇರೆಡೆಗೆ ತಿರುಗಿಸಲು ಇಷ್ಟವಿರಲಿಲ್ಲ. ಅದನ್ನು ದೀರ್ಘಕಾಲದವರೆಗೆ ಶುಶ್ರೂಷೆ ಮಾಡಬೇಕಾಗಿತ್ತು. ಆದ್ದರಿಂದ, ಕೆಲವು ಟಾಟಾ ನಿರ್ದೇಶಕರು, ಮುಖ್ಯವಾಗಿ ನಾನಿ ಪಾಲ್ಖಿವಾಲಾ, ಟಾಟಾಗಳು ಗಿರಣಿಯನ್ನು ದಿವಾಳಿಯಾಗಿಸಬೇಕು ಎಂಬ ಮಾರ್ಗವನ್ನು ತೆಗೆದುಕೊಂಡರು, ಅಂತಿಮವಾಗಿ 1986 ರಲ್ಲಿ ಮುಚ್ಚಲಾಯಿತು. ಈ ನಿರ್ಧಾರದಿಂದ ರತನ್ ಟಾಟಾ ತೀವ್ರ ನಿರಾಶೆಗೊಂಡರು. ನಂತರ ಹಿಂದೂಸ್ತಾನ್ ಟೈಮ್ಸ್ ಗೆ ನೀಡಿದ ಸಂದರ್ಶನದಲ್ಲಿ ಸಾಮ್ರಾಜ್ಞಿಗೆ ಅದನ್ನು ತಿರುಗಿಸಲು ಕೇವಲ 50 ಲಕ್ಷ ರೂ. ಬೇಕಾಗಿತ್ತು ಎಂದು ಹೇಳಿಕೊಳ್ಳುತ್ತಿದ್ದರು.

1961ರಲ್ಲಿ ರತನ್ ಟಾಟಾ ಅವರನ್ನು ಟಾಟಾ ಇಂಡಸ್ಟ್ರೀಸ್ ನ ನಿರ್ದೇಶಕರಾಗಿ ನೇಮಿಸಲಾಯಿತು. ಗ್ರೂಪ್ ನ ಮತ್ತೊಂದು ಹಿಡುವಳಿ ಕಂಪನಿಯಾದ ಟಾಟಾ ಇಂಡಸ್ಟ್ರೀಸ್ ಅನ್ನು ಗ್ರೂಪ್ ನ ಸ್ಟ್ರಾಟಜಿ ಥಿಂಕ್-ಟ್ಯಾಂಕ್ ಆಗಿ ಪರಿವರ್ತಿಸುವ ಜವಾಬ್ದಾರಿಯನ್ನು ಅವರು ವಹಿಸಿಕೊಂಡರು ಮತ್ತು ಉನ್ನತ ತಂತ್ರಜ್ಞಾನದ ವ್ಯವಹಾರಗಳಲ್ಲಿ ಹೊಸ ಉದ್ಯಮಗಳ ಪ್ರವರ್ತಕರಾದರು.

ಟಾಟಾ ಸನ್ಸ್‌ನ ಈಕ್ವಿಟಿ ಕ್ಯಾಪಿಟಲ್ ನ ಸುಮಾರು 66% ಅನ್ನು ಟಾಟಾ ಕುಟುಂಬದ ಸದಸ್ಯರು ನೀಡುವ ಲೋಕೋಪಕಾರಿ ಟ್ರಸ್ಟ್ ಗಳು ಹೊಂದಿವೆ. ಈ ಎರಡು ದೊಡ್ಡ ಟ್ರಸ್ಟ್ ಗಳೆಂದರೆ ಸರ್ ದೊರಬ್ಬಿ ಟಾಟಾ ಟ್ರಸ್ಟ್ ಮತ್ತು ಸರ್ ರತನ್ ಟಾಟಾ ಟ್ರಸ್ಟ್. ಇವುಗಳನ್ನು ಜಮ್ಶೆಡ್ಜಿ ಟಾಟಾ ಅವರ ಪುತ್ರರ ಕುಟುಂಬಗಳು ರಚಿಸಿವೆ. ಈ ಷೇರುದಾರರು ರತನ್ ಅವರ ಪೂರ್ವಜರಿಗೆ ಸೇರಿದವರಾಗಿರುವುದರಿಂದ ಮತ್ತು ಈ ಟ್ರಸ್ಟ್ ಗಳನ್ನು ಅವರು ರಚಿಸಿದ್ದರಿಂದ, ರತನ್ ಎನ್. ಟಾಟಾ ಅವರ ಮೇಲೆ ಪರಿಣಾಮಕಾರಿ ಹಕ್ಕನ್ನು ಹೊಂದಿದ್ದಾರೆ. ಇದರ ಎಲ್ಲಾ ಮೌಲ್ಯವನ್ನು ಸೇರಿಸಿದರೆ, ಅವರ ನಿವ್ವಳ ಮೌಲ್ಯವು ಸುಮಾರು 50 ಶತಕೋಟಿ ಎಂದು ಅಂದಾಜಿಸಲಾಗಿದೆ. ಇದು ರತನ್ ಎನ್. ಟಾಟಾ ಅವರನ್ನು ವಿಶ್ವದ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರನ್ನಾಗಿ ಮಾಡುತ್ತದೆ.

ಪುಸ್ತಕದ ಪರಿವಿಡಿಯಲ್ಲಿ ರತನ್ ಟಾಟಾ ಬಗ್ಗೆ ಸಮಗ್ರ ಮಾಹಿತಿ ನೀಡುವ ಅಧ್ಯಾಯಗಳ ಪಟ್ಟಿ ಇದೆ. 216 ಪುಟಗಳ ಈ ಪುಸ್ತಕ ಬಹಳಷ್ಟು ಪ್ರಮುಖ ಮಾಹಿತಿಯನ್ನು ಹೊಂದಿದ್ದರೂ ಅನುವಾದ ಸರಾಗವಾಗಿ ಓದಿಸಿಕೊಂಡು ಹೋಗುತ್ತಿಲ್ಲ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248